

'ಸದಾ ನಿಮ್ಮೊಂದಿಗೆ'ಯಲ್ಲಿ ಪ್ರಿಯಾಂಕ ಉಪೇಂದ್ರ

ತಂದುಕೊಡುವಂತಾಗಿದೆ. ಹೀಗಾಗಿ ಹಲವು ಸಿನಿಮಾಗಳನ್ನು ಮುಂಗಡ ಕಾದಿರಿಸಿ ತಮ್ಮ ಮನೆಯಲ್ಲಿಯೇ (ಅಥವಾ ತಾವಿರುವ ತಾಣದಲ್ಲಿಯೇ) ಅಂತರ್ಜಾಲದ ಮೂಲಕ ನೋಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಈ ಹೊಸ ತಂತ್ರಜ್ಞಾನದ ಅನುಕೂಲಗಳು ಹೆಚ್ಚಾದ ಹಾಗೆ ಅವುಗಳಿಂದ ಬರುವ ಆದಾಯವೂ ಹೆಚ್ಚಾಗಬಹುದು ಎಂದು ವರದಿಗಳು ಹೇಳುತ್ತಿವೆ. ಆ ಹಿನ್ನೆಲೆಯಲ್ಲಿ ಹಲವರು ಅಂಗೈ ಮೇಲಿನ ಮೊಬೈಲ್‌ನ ತೆರೆಗೆ ಹೊಂದುವ ಹಾಗೆ ಕಾರ್ಯಕ್ರಮಗಳನ್ನು ರೂಪಿಸುತ್ತಾ ಇರುವುದೂ ಉಂಟು. ಈ ಹೊಸ ಬದಲಾವಣೆಯ ಗಾಳಿಯು ನಮ್ಮ ಉದ್ಯಮದಲ್ಲಿಯೂ ಅನೇಕ ಹೊಸತುಗಳಿಗೆ ಅವಕಾಶ ಮಾಡಿ ಕೊಡಬಹುದು ಎಂಬ ನಂಬಿಕೆ ಉದ್ಯಮದಲ್ಲಿ ಮೂಡಿದೆ.

## ಈಗೇನು ಪ್ರಸಾರವಾಗುತ್ತಿದೆ?

ಈಗ ನಮ್ಮ ಭಾಷೆಯಲ್ಲಿ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳಲ್ಲಿ ಶೇಕಡ 60ರಷ್ಟು ಹೂರಣ ಬೇರೆ ಭಾಷೆಗಳಲ್ಲಿ ಯಶಸ್ವಿಯಾದ ಕಾರ್ಯಕ್ರಮಗಳಿಂದ ತೆಗೆದುಕೊಂಡದ್ದು. ಇವುಗಳ ಮೊದಲ ಹಲವು ಪ್ರಕರಣಗಳು ಮೂಲದಂತೆಯೇ ತಯಾರಾಗುತ್ತವೆ. ನಂತರ ಆಯಾ ತಂಡ ಮತ್ತು ಆಯಾ ಬರಹಗಾರರ ಕಾರಣವಾಗಿ ಅದೇ ಕತೆಯ ಅದೇ ಪಾತ್ರಗಳನ್ನು ನಮ್ಮ ನೆಲಕ್ಕೆ ಹೊಂದಿಕೊಳ್ಳುವಂತೆ ಬದಲಿಸಲಾಗುತ್ತದೆ. ಇದರಿಂದಾಗಿ ಕಾಲಾಂತರದಲ್ಲಿ ಅಂತಹ ಕಾರ್ಯಕ್ರಮಗಳು ತಮ್ಮ ನೋಡುಗರನ್ನು ಕಡಿಮೆಯಾಗಿಸಿಕೊಂಡದ್ದೂ ಇದೆ; ಹೆಚ್ಚಾಗಿಸಿಕೊಂಡದ್ದೂ ಇದೆ.

'ಈ ಬಗೆಯ ಕಾರ್ಯಕ್ರಮಗಳಲ್ಲಿ ನಮ್ಮತನ ಎಂಬುದು ಕಾಲಕಾಲಕ್ಕೂ ಕಡಿಮೆಯಾಗುತ್ತಿದೆ. ಎಲ್ಲಾ ಪಾತ್ರಗಳು ತಮ್ಮ ವಯಸ್ಸಿಗೆ ತಕ್ಕಂತಹ ವೇಷಭೂಷಣದಲ್ಲಿ ಸಹ ಇರುವುದಿಲ್ಲ. ಉತ್ತರದವರ ಹಾಗೆ ಆಗುವ ಮದುವೆ, ಅವಕುಂಠಣ ಹಾಕಿಕೊಂಡ ಮದುವಣಗಿತ್ತಿ. ಮದರಂಗಿ (ಮೆಹಂದಿ) ಹಚ್ಚಿಕೊಳ್ಳುವ ನಮ್ಮದಲ್ಲದ ಸಂಪ್ರದಾಯ ಇತ್ಯಾದಿಗಳು ಹೆಚ್ಚಾಗಿವೆ' ಎನ್ನುವುದು ಒಬ್ಬ ನೋಡುಗರ ಅಭಿಪ್ರಾಯ. ತಮ್ಮ ಕಾರ್ಯಕ್ರಮಗಳ ಗ್ಲಾಮರ್ ಹೆಚ್ಚಿಸಲು ಹೊರಟು, ನಮ್ಮತನದಿಂದ ದೂರ ಉಳಿಯುವುದು ಹೆಚ್ಚಾಗಿದ್ದಕ್ಕೆ ಇದೂ ಒಂದು ಕಾರಣವಾಗಿರಬಹುದು.

## ಇವೆಲ್ಲದರ ಆಚೆಗೆ..

ಕಾಲಮಾನ ಏನೇ ಆದರೂ, ಕತೆ ಹೇಳುವ ಕಾಯಕಕ್ಕೆ ಕೊನೆಯಿಲ್ಲ. ಹೀಗಾಗಿ ಎಲ್ಲಾ ಹೊಸ ಬಗೆಯ ತಂತ್ರಗಳನ್ನು ಬಳಸಿಕೊಂಡು ಹೊಸ ಕತೆಗಳು ದೃಶ್ಯರೂಪವಾಗಿ ಬರುತ್ತಲೇ ಇರುತ್ತವೆ. ವರ್ಷದ ಹಿಂದೆ ಸುಮಾರು 1600 ಕೋಟಿ ರೂಪಾಯಿಗಳಷ್ಟು ವಾರ್ಷಿಕ ವಹಿವಾಟು ನಡೆಸುತ್ತಾ ಇದ್ದ ಕನ್ನಡದ ಕಿರುತೆರೆಯ ಲೋಕ, ನೋಟು ಅಮಾನ್ಯೀಕರಣದ ಬೆನ್ನಲ್ಲೇ ದಿಢೀರೆಂದು ಕುಸಿಯಿತು. ಶೇಕಡಾ 60ರಷ್ಟು ಕಿರುತೆರೆ ಕಾರ್ಯಕ್ರಮಗಳ ತಯಾರಕರು ಭೂಮಿಗಿಳಿದರು. ಆದರೆ ಇತ್ತೀಚೆಗೆ ಮತ್ತೆ ಕಿರುತೆರೆ ಉದ್ಯಮ ಚೇತರಿಸಿಕೊಂಡಿದೆ. ವಾರ್ಷಿಕ ಸುಮಾರು 1000 ಕೋಟಿ ರೂಪಾಯಿಗಳ ವಹಿವಾಟು ನಡೆಸುತ್ತಿದೆ. ಇದು ಕನ್ನಡ ಸಿನಿಮಾ ಉದ್ಯಮಕ್ಕಿಂತ ದೊಡ್ಡ ಉದ್ಯಮ. ಮಾತ್ರವಲ್ಲ, ಹೆಚ್ಚು ಸ್ಥಿರತೆ ಸಾಧಿಸಿರುವ ಉದ್ಯಮವೂ ಹೌದು. ಇನ್ನು ಕೆಲವೇ ವರ್ಷಗಳಲ್ಲಿ ವಹಿವಾಟು ದುಪ್ಪಟ್ಟಾಗಲಿದೆ ಎಂದು ಮಾರುಕಟ್ಟೆ ತಜ್ಞರ ವರದಿಗಳು ಹೇಳುತ್ತಿವೆ. ಈ ಹಿನ್ನೆಲೆಯಲ್ಲಿ ನಮ್ಮಲ್ಲಿ ಮತ್ತಷ್ಟು ಹೊಸ ಟಿವಿ ವಾಹಿನಿಗಳು, ಹೊಸ ಅಂತರ್ಜಾಲದ ಮೂಲಕ ಪ್ರಸಾರ ಮಾಡುವ ತಾಣಗಳು ಸಹ ಆರಂಭವಾಗಬಹುದು.

ನೋಡುಗರ ಪ್ರತಿಕ್ರಿಯೆ ಬೆಳೆದಂತೆ ತಯಾರಕರ ಕಾರ್ಯಕ್ರಮವೂ ಹಲವು ಪಲ್ಲಟಗಳನ್ನು ಕಾಣಬಹುದು. ಕಾರ್ಯಕ್ರಮ ತಯಾರಕರ ಯಾದಿಗೆ ಹೊಸ ಆಲೋಚನೆಗಳು ಸೇರಿದಂತೆ ಹೊಸಬಗೆಯ ಕಾರ್ಯಕ್ರಮಗಳ ಸಂಖ್ಯೆ ಹೆಚ್ಚಾಗಿ ಅದರಿಂದ ಹೊಸ ನೋಡುಗರ ವರ್ಗವೂ ಸೃಷ್ಟಿಯಾಗಬಹುದು.

ಒಟ್ಟಾರೆ ಇಂದು 'ನಿಂದಾಸ್ತುತಿಯಲ್ಲಿ ಅರಳಿದ ಹೂ'ಗಳಂತಿರುವ ಟಿ.ವಿ ಕಾರ್ಯಕ್ರಮಗಳು ನಾಳೆ ಸ್ಪಷ್ಟ ಸೂರ್ಯನಂತಹ ಬೆಳಕಿನಲ್ಲಿ ಅರಳುವ ಶಕ್ತಿಯನ್ನು ಸಹ ಪಡೆಯಬಹುದು. ಆ ನಾಳೆಗಾಗಿ ಕಾಯೋಣ.

***

ಟಿಪ್ಪಣಿ: ಈ ಲೇಖನಕ್ಕಾಗಿ ಚಾರ್ಲ್ಸ್ ಮ್ಯಾಕಾಯ್ ಅವರು ಅಮೆರಿಕಾದ ಟಿವಿ ನೋಡುಗರನ್ನು ಕುರಿತಂತೆ ಬರೆದಿರುವ ಲೇಖನದಲ್ಲಿನ ನೋಡುಗರ ಅಭಿಪ್ರಾಯಗಳನ್ನು ಹಾಗೂ ನಾನು ಸ್ವತಃ ಮಾತಾಡಿಸಿದ ಹಲವರ ಅಭಿಪ್ರಾಯಗಳನ್ನು ಬಳಸಿಕೊಂಡಿದ್ದೇನೆ. ಈ ಅಭಿಪ್ರಾಯ ಸಂಗ್ರಹದಲ್ಲಿ ಸಹಕರಿಸಿದ ಹಲವು ಟೆಲಿವಿಷನ್ ಬರಹಗಾರರಿಗೂ ವಾಹಿನಿಗಳಲ್ಲಿ ದುಡಿಯುತ್ತಾ ಇರುವ ಫಿಕ್ಷನ್ ಮುಖ್ಯಸ್ಥರಿಗೂ ಧನ್ಯವಾದಗಳು.

(★ ಲೇಖಕರು ರಂಗಭೂಮಿ, ಸಿನಿಮಾ ಮತ್ತು ಟಿ.ವಿ ಧಾರಾವಾಹಿಗಳ ನಟ/ ನಿರ್ದೇಶಕರು.)